RNU AIR DHARWAD

APRIL 10, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಕಲಬುರಗಿ, ಹುಬ್ಬಳ್ಳಿ–ಧಾರವಾಡ, ಮೈಸೂರು ಮತ್ತು ಮಂಗಳೂರಿನ, ಔದ್ಯಮಿಕ ಪ್ರಗತಿ ಸಾಧನೆಗೆ, ಸಾವಿರ ಕೋಟಿ ರೂಪಾಯಿ ಅನುದಾನ, ಮೀಸಲು.**
- **ಪ್ರಾದೇಶಿಕ ಅಸಮತೋಲನ ನಿವಾರಣೆಗೆ, ಸಾರ್ವಜನಿಕರು, ಸಂಘ–ಸಂಸ್ಥೆಗಳ ಸಹಕಾರ ಅಗತ್ಯ – ಆರ್. ವಿಶಾಲ.**
- **ಪ್ರಧಾನಮಂತ್ರಿ ಮುದ್ರಾ ಯೋಜನೆ; ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಿಂದ, 2 ಸಾವಿರ ಕೋಟಿ ರೂಪಾಯಿ, ಸಾಲ ವಿತರಣೆ – ಶ್ರೀಕಾಂತ ಭಂಡಿವಾಡ.**
- **ಜೈನ ಧರ್ಮದ 24ನೇ ತೀರ್ಥಂಕರ, ಶ್ರೀ ಮಹಾವೀರರ ಜಯಂತಿ, ಇಂದು; ಗಣ್ಯರ ಶುಭಾಶಯ.**

<><><>

**ಈಗ ವಾರ್ತೆಗಳ ವಿವರ**

<><><>

**ಕಲಬುರಗಿ, ಹುಬ್ಬಳ್ಳಿ–ಧಾರವಾಡ, ಮೈಸೂರು ಮತ್ತು ಮಂಗಳೂರು ಸೇರಿದಂತೆ, ರಾಜ್ಯದ ಎರಡನೇ ಸಾಲಿನ ನಗರಗಳಲ್ಲಿ, ಉದ್ಯಮಶೀಲತೆ ಸಾಧಿಸಿ, 5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲು, ಸಾವಿರ ಕೋಟಿ ರೂಪಾಯಿ ಅನುದಾನವನ್ನು, ರಾಜ್ಯ ಸರ್ಕಾರ, ಪ್ರಸಕ್ತ ಸಾಲಿಗೆ, ಮೀಸಲಿರಿಸಿದೆ ಎಂದು, ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ. ಕರ್ನಾಟಕ ಡಿಜಿಟಲ್ ಎಕಾನಮಿ ಮಿ ’ನ್ ಮೂಲಕ, ಕಲಬುರಗಿಯಲ್ಲಿ ವಿಶ್ವ ದರ್ಜೆಯ ಇನ್‌ಕ್ಯುಬೇಷನ್ ಸೆಂಟರ್ ಮತ್ತು ಆಫ್ ಶೋರ್ ಡೆವಲಪ್ಮೆಂಟ್ ಸೆಂಟರ್ ಪ್ರಾರಂಭಿಸುವುದಾಗಿ, ಅವರು ಪ್ರಕಟಿಸಿದರು. ಕಲಬುರಗಿ ನವೋದ್ಯಮ ಕಾರ್ಯತಂತ್ರ ಕೇಂದ್ರ ಹಾಗೂ ಸಾಫ್ಟ್‌ವೇರ್ ಡೆವಲಪ್ಮೆಂಟ್ ಸೆಂಟರ್ ಸಹ ಪ್ರಾರಂಭಿಸಲಾಗುತ್ತಿದೆ ಎಂದು, ಅವರು ಹೇಳಿದರು.**

<><><>

**ಪ್ರಾದೇಶಿಕ ಅಸಮತೋಲನ ನಿವಾರಿಸಲು, ಸಂಘ ಸಂಸ್ಥೆಗಳು, ಸರ್ಕಾರದೊಂದಿಗೆ ಕೈ ಜೋಡಿಸಬೇಕು ಎಂದು, ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಸದಸ್ಯ ಕಾರ್ಯದರ್ಶಿ ವಿಶಾಲ್ ಆರ್. ಕೋರಿದ್ದಾರೆ. ಹಾವೇರಿಯಲ್ಲಿ ಜರುಗಿದ, ಸಾರ್ವಜನಿಕ ಸಂವಾದ ಸಭೆಯಲ್ಲಿ ಅವರು, ಮಾತನಾಡಿದರು. ಪ್ರಾದೇಶಿಕ ಅಸಮತೋಲನ, ರಾಜ್ಯದ ಒಟ್ಟು ಅಭಿವೃದ್ಧಿ**

ಮತ್ತು ಆರ್ಥಿಕತೆಯ ಮೇಲೆ, ಅಡ್ಡ ಪರಿಣಾಮ ಬೀರಿದೆ. ಆರ್ಥಿಕ ತಜ್ಞ ಎಂ.ಗೋವಿಂದರಾವ್ ನೇತೃತ್ವದ ಸಮಿತಿ, ಪ್ರಾದೇಶಿಕ ಅಸಮತೋಲನ ನಿವಾರಿಸಲು, ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿ, ಸೂಚ್ಯಾಂಕ ನಿಗದಿ ಪಡಿಸಿ, ಸರ್ಕಾರಕ್ಕೆ ವರದಿ ಮೂಲಕ ಶಿಫಾರಸು ಮಾಡಲಿದೆ ಎಂದರು.

<><><>

ಗದಗ–ವಾಡಿ–ಕು ್ಗಿ–ಯಲಬುರ್ಗಾ ಮಾರ್ಗದ, 100 ಕಿಲೋ ಮೀಟರ್ ರೇಲ್ವೆ ಮಾರ್ಗ ನಿರ್ಮಾಣ ಕಾಮಗಾರಿ, ಪೂರ್ಣಗೊಂಡಿದ್ದು, ಸದ್ಯದಲ್ಲೇ ಉದ್ಘಾಟನೆ ನೆರವೇರಲಿದೆ ಎಂದು, ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ತುಮಕೂರಿನಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

<><><>

ಹಾವೇರಿಯಲ್ಲಿ ನಾಳೆ, ವಂದೇ ಭಾರತ್ ರೈಲಿಗೆ ಚಾಲನೆ ನೀಡಲಾಗುವುದು. ಬೆಂಗಳೂರಿನಿಂದ ಕುಕ್ಕೆ ಸುಬ್ರಹ್ಮಣ್ಯಕ್ಕೆ, ವಾರದಲ್ಲಿ ನಾಲ್ಕು ದಿನ ಹೊಸ ರೈಲು ಸಂಚರಿಸಲಿದ್ದು, ನಾಡಿದ್ದು 12 ರಂದು ಚಾಲನೆ ನೀಡಲಾಗುವುದು ಎಂದು, ಹೇಳಿದರು.

<><><>

ರಾಜ್ಯದಲ್ಲಿ ಬಹು ದಿನಗಳಿಂದ ನನೆಗುದಿಗೆ ಬಿದ್ದಿದ್ದ, 33 ಸಾವಿರ ಕೋಟಿ ರೂಪಾಯಿ ವೆಚ್ಚದ, 11 ಯೋಜನೆಗಳಿಗೆ, ಕೇಂದ್ರ ಸರ್ಕಾರ ಅನುದಾನ ಒದಗಿಸುತ್ತಿದ್ದು, ಶೀಘ್ರ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಎಂದರು.

<><><>

ರಾಜ್ಯದ ಸರ್ಕಾರಿ ಶಾಲೆಗಳ, ಸಮಗ್ರ ವಿಕಾಸಕ್ಕಾಗಿ, ಕಳೆದ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾದ, 'ಎಸ್.ಡಿ.ಎಂ.ಸಿ. ಪುಷ್ಟಿ' ಯೋಜನೆಯಡಿ, ಧಾರವಾಡ ತಾಲೂಕು ಕೊಟಬಾಗಿಯ, ಹಿರಿಯ ಪ್ರಾಥಮಿಕ ಕನ್ನಡ ಸರ್ಕಾರಿ ಶಾಲೆ, 'ಅತ್ಯುತ್ತಮ ಶಾಲೆ ಪ್ರಶಸ್ತಿ'ಗೆ ಆಯ್ಕೆಯಾಗಿದೆ.

<><><>

ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಅಧ್ಯಕ್ಷ ಮಲ್ಲಿಕಾರ್ಜುನ ನಾಗನಗೌಡರ ಮನವಿ ಮೇರೆಗೆ, ಧಾರವಾಡ ತಾಲೂಕು ಬೇಲೂರಿನ ರೋಟರಿ ಕ್ಲಬ್ ಹಾಗೂ ಕೈಗಾರಿಕಾ ಪ್ರದೇಶದ ಹಲವು ಕಂಪೆನಿಗಳು, ಶಾಲೆಯ ಮೂಲ ಸೌಕರ್ಯ, ಪಾಠೋಪಕರಣ ಹಾಗೂ ಪೀಠೋಪಕರಣಗಳನ್ನು ಒದಗಿಸಿ, ಸರ್ವಾಂಗ ಸುಂದರಗೊಳಿಸಿವೆ.

<><><>

'ಎಸ್.ಡಿ.ಎಂ.ಸಿ. ಪುಷ್ಟಿ' ಅತ್ಯುತ್ತಮ ಶಾಲಾ ಪ್ರಶಸ್ತಿಗೆ ಭಾಜನವಾದ, ಶಾಲೆಯ ಪ್ರಧಾನ ಶಿಕ್ಷಕ, ಮಹಾವೀರ ಅಣ್ಣಿಗೇರಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಮಹಾವೀರ ಅಣ್ಣಿಗೇರಿ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಪ್ರಧಾನಮಂತ್ರಿ ಮುದ್ರಾ ಸಾಲ ಯೋಜನೆಗೆ, ಹತ್ತು ವ ’ರ್ಗಗಳು ಪೂರ್ಣಗೊಂಡಿವೆ. ಧಾರವಾಡದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ತನ್ನ ಸೇವಾ ವ್ಯಾಪ್ತಿಯ ಜಿಲ್ಲೆಗಳಲ್ಲಿ, ಮುದ್ರಾ ಸಾಲ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಿದೆ. ಕೆ.ವಿ.ಜಿ. ಬ್ಯಾಂಕ್ ಕಾರ್ಯಾಧ್ಯಕ್ಷ, ಶ್ರೀಕಾಂತ ಭಂಡಿವಾಡ ಅವರು, ಅರ್ಹ ಫಲಾನುಭವಿಗಳನ್ನು ಗುರುತಿಸಿ, ಸಾಲ ಸೌಲಭ್ಯ ಒದಗಿಸಿ, ಸ್ವಯಂ ಉದ್ಯೋಗ ಕೈಗೊಳ್ಳಲು, ಬ್ಯಾಂಕ್ ಕೈಗೊಂಡ ಕ್ರಮದ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಶ್ರೀಕಾಂತ ಭಂಡಿವಾಡ ಧ್ವನಿ 50 ಸೆಕೆಂದುಗಳು

<><><>

ಜೈನ ಧರ್ಮದ 24ನೇ ಹಾಗೂ ಕೊನೆಯ ತೀರ್ಥಂಕರರಾದ, ಶ್ರೀ ಮಹಾವೀರರ ಜಯಂತಿ, ಇಂದು. ದೇಶಾದ್ಯಂತ, ಶ್ರೀ ಮಹಾವೀರ ಜನ್ಮ ಕಲ್ಯಾಣಕ ಎಂದು, ಶ್ರದ್ಧಾ, ಭಕ್ತಿಯಿಂದ ಆಚರಿಸಲಾಗುತ್ತಿದೆ. ಗಣ್ಯರು ಶುಭಾಶಯ ಕೋರಿದ್ದಾರೆ. ಶ್ರೀ ಮಹಾವೀರ ಜಯಂತಿಯ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಹಿರಿಯ ವಿದ್ವಾಂಸ ಡಾಕ್ಟರ್ ಶಾಂತಿನಾಥ ದಿಬ್ಬದ.

<><><>

ಡಾ. ಶಾಂತಿನಾಥ ದಿಬ್ಬದ ಧ್ವನಿ 45 ಸೆಕೆಂದುಗಳು

<><><>

ಭಗವಾನ್, ಶ್ರೀ 1008 ನೇಮಿನಾಥ ತೀರ್ಥಂಕರರ, ಪಂಚಕಲ್ಯಾಣ ಮತ್ತು ಮಹಾ ರಥೋತ್ಸವ ನಾಡಿದ್ದು 12 ರಂದು, ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ನಡೆಯಲಿದೆ. ಶನಿವಾರ ಬೆಳಗ್ಗೆ 11 ಗಂಟೆಗೆ, ರಥೋತ್ಸವ ಹಾಗೂ ಅಂದು ರಾತ್ರಿ 8 ಗಂಟೆಗೆ, ಶ್ರೀ ಮಠದ ಬಸದಿಯಲ್ಲಿ, ಶ್ರೀ ಕೂ ್ಮಾಂಡಿನಿ ದೇವಿಗೆ ಮಹಾ ಮಂಗಳಾರತಿ ಆಯೋಜಿತವಾಗಿದೆ.

<><><>

ಧಾರವಾಡ ತಾಲೂಕು ಅಮ್ಮಿನಬಾವಿಯ, ಪ್ರಾಚೀನ ಶ್ರೀ ನೇಮಿನಾಥ ಜಿನಾಲಯಕ್ಕೆ, ಗಣಿನಿ ಆರಿಕಾ ರತ್ನ ಜಿನವಾಣಿ ಮಾತಾಜಿ ನೇತೃತ್ವದ, ಸಂಘ ಪರಿವಾರದ, ಶುಭಾ ಗಮನವಾಗಿದೆ. ‘ವಿಶ್ವ ಣಮೋಕಾರ ಮಂತ್ರ ದಿನಾಚರಣೆ’ಯ ಪಾವನ ಸಾನ್ನಿಧ್ಯವಹಿಸಿ ಅವರು, ಆಶೀರ್ವಚನ ನೀಡಿದರು.

<><><>

ಬೆಳಗಾವಿ ಜಿಲ್ಲೆ ನಿಡಸೋಶಿ ಮಠದ, ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಹಾಗೂ ವಿಜಯಪುರದ ಸೀಕ್ಯಾಬ್ ಸಂಸ್ಥೆಯ ಅಧ್ಯಕ್ಷ, ಶಮಸುದ್ದೀನ್ ಅಬ್ದುಲ್ಲಾ ಪುಣೇಕರ ಅವರಿಗೆ, ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗೌರವ ಡಾಕ್ಟರೆಟ್ ಪದವಿ ಪ್ರಕಟಿಸಲಾಗಿದೆ. ಉಪ ಕುಲಪತಿ ಸಿ.ಎಂ.ತ್ಯಾಗರಾಜ, ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. 13ನೇ ಘಟಿಕೋತ್ಸವ, ನಾಳೆ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ, ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ನಡೆಯಲಿದೆ; ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಘಟಿಕೋತ್ಸವಕ್ಕೆ ಚಾಲನೆ ನೀಡಲಿದ್ದು, ಮುಂಬೈನ ಹಿರಿಯ ಸಾಹಿತಿ, ಗಣೇಶ್ ನಾರಾಯಣದಾಸ ದೇವಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದರು.

<><><>

ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲೂಕಿನ, ಜಲದುರ್ಗ ಗ್ರಾಮದ ಬಳಿ, ಸರ್ಕಾರಿ ಬಸ್, ರಸ್ತೆ ಬದಿಯ ಇಳಿ ಜಾರಿನಲ್ಲಿ, ನಿಯಂತ್ರಣ ತಪ್ಪಿ, ಮನೆಯೊಂದರ ಮೇಲೆ ಉರುಳಿ ಬಿದ್ದು, 20 ಪ್ರಯಾಣಿಕರಿಗೆ ಗಾಯಗಳಾಗಿವೆ. ಬೆಂಗಳೂರಿನಿಂದ ಶೃಂಗೇರಿಗೆ ಬರುತಿದ್ದ ಬಸ್ ಅಪಘಾತಕ್ಕೀಡಾಗಿದ್ದು, ಬಸ್ಸಿನಲ್ಲಿ 50ಕ್ಕೂ ಹೆಚ್ಚು ಪ್ರಯಾಣಿಕರಿದ್ದರು. ಗಾಯಗೊಂಡವರನ್ನು, ಕೊಪ್ಪ, ಎನ್.ಆರ್ ಪುರ ಆಸ್ಪತ್ರೆಗಳಿಗೆ, ಜಯಪುರ ಪೊಲೀಸರು ದಾಖಲಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಜರ್ಮನಿಯ, ಡಾಕ್ಟರ್ ಸ್ಯಾಮ್ಯುಯೆಲ್ ಹನಿಮನ್ ಅವರ ಜನ್ಮ ದಿನದ ಹಿನ್ನೆಲೆ, ಇಂದು, ವಿಶ್ವ ಹೋಮಿಯೋಪಥಿ ದಿನಾಚರಣೆ ಆಯೋಜಿತವಾಗಿದೆ.

<><><>

ರಾಜ್ಯ ಸರ್ಕಾರದ ವಿರುದ್ಧ, ಬಿಜೆಪಿ ಆಯೋಜಿಸಿರುವ, ಜನಾಕ್ರೋಷ ಯಾತ್ರೆ, ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ, ಮಡಿಕೇರಿ ತಲುಪಿದೆ.

<><><>

ಕಲಬುರಗಿಯಲ್ಲಿ ಗರಿಷ್ಠ, 40 ದಶಾಂಶ 6 ಡಿಗ್ರಿ ಸೆಲ್ಶಿಯಸ್ ತಾಪಮಾನ ದಾಖಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಲಬುರಗಿ, ಹುಬ್ಬಳ್ಳಿ-ಧಾರವಾಡ, ಮೈಸೂರು ಮತ್ತು ಮಂಗಳೂರಿನ, ಔದ್ಯಮಿಕ ಪ್ರಗತಿ ಸಾಧನೆಗೆ, ಸಾವಿರ ಕೋಟಿ ರೂಪಾಯಿ ಅನುದಾನ, ಮೀಸಲು.
- ಪ್ರಾದೇಶಿಕ ಅಸಮತೋಲನ ನಿವಾರಣೆಗೆ, ಸಾರ್ವಜನಿಕರು, ಸಂಘ-ಸಂಸ್ಥೆಗಳ ಸಹಕಾರ ಅಗತ್ಯ – ಆರ್. ವಿಶಾಲ.
- ಪ್ರಧಾನಮಂತ್ರಿ ಮುದ್ರಾ ಯೋಜನೆ; ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಿಂದ, 2 ಸಾವಿರ ಕೋಟಿ ರೂಪಾಯಿ, ಸಾಲ ವಿತರಣೆ – ಶ್ರೀಕಾಂತ ಭಂಡಿವಾಡ.
- ಜೈನ ಧರ್ಮದ 24ನೇ ತೀರ್ಥಂಕರ, ಶ್ರೀ ಮಹಾವೀರರ ಜಯಂತಿ, ಇಂದು; ಗಣ್ಯರ ಶುಭಾಶಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>